# ಸಹಸ್ರ ಚಂದ್ರದರ್ಶನದ ಖುಷಿಯಲ್ಲಿ...

**ಮನೆಯಲ್ಲಿ ನಡೆಯುವ ಧಾರ್ಮಿಕ ಕಾರ್ಯ ದೂರದೂರದಲ್ಲಿರುವ ಮನೆ ಮಂದಿಯನ್ನೆಲ್ಲ ಒಟ್ಟಿಗೆ ಕಲೆ ಹಾಕುವ ಒಂದು ನೆಪ. ತಂದೆಯವರ ಹೆಸರಿನಲ್ಲಿ ಸಹಸ್ರ ಚಂದ್ರದರ್ಶನ ಶಾಂತಿ ಮಾಡಿಸಿದ್ದು, ಇಡೀ ಕುಟುಂಬವನ್ನು ಒಂದಾಗಿಸುವ ಅದ್ಭುತ ಕ್ಷಣವಾಗಿತ್ತು. ಇದು ಸದಾ ನೆನಪಿನಂಗಳದಲ್ಲಿ ಉಳಿಯುವಂತೆ ಮಾಡಿದೆ.**

**■ ಲಕ್ಷ್ಮೀದೇವಿ ಸಿ. ನಾವಡ**



ನಾವೆಲ್ಲಾ ಹುಟ್ಟಿ ಬೆಳೆದದ್ದು ಮೈಸೂರು ಜಿಲ್ಲೆಯ ಬಿಳಿಕೆರೆಯಾದರೂ ಮನೆತನವೆಂಬುದಿರುವುದು ಉಡುಪಿ ಜಿಲ್ಲೆಯ ಬಾರಕೂರಿನಲ್ಲಿ. ಬಾರಕೂರಿನವರಾದ ತಂದೆ ತಮ್ಮ ಹೊಟ್ಟೆಪಾಡಿಗಾಗಿ ಬಿಳಿಕೆರೆಯಲ್ಲಿ ಸಣ್ಣ ಹೋಟೆಲನ್ನು ಇಟ್ಟುಕೊಂಡು ಜೀವನ ನಿರ್ವಹಣೆ ಮಾಡಿದರು. ನನ್ನ ಹತ್ತನೇ ವಯಸ್ಸಿಗೇ ತಾಯಿಯನ್ನು ಕಳೆದುಕೊಂಡಿದ್ದರೂ ಮರುಮದುವೆಯಾಗದೆ, ಅವರೇ ನಾವೇಳು ಮಕ್ಕಳಿಗೆ ಪೋಷಕರಾಗಿ ತಾಯಿಯ ನೆನಪು ಬಾರದಂತೆ ಬೆಳೆಸಿದರು. ಅಲ್ಲದೆ ತಾಯಿಯ ಆಸೆಯಂತೆ ಮಕ್ಕಳು ವಿದ್ಯಾವಂತರಾಗಬೇಕೆಂಬ ಕನಸನ್ನೂ ನನಸು ಮಾಡಿದರು.

ಅಣ್ಣಂದಿರೆಲ್ಲಾ ಮದುವೆಯಾದ ಮೇಲೆ ನಾವೆಲ್ಲಾ ವರ್ಷದಲ್ಲಿಯೋ ಅಥವಾ ವಿಶೇಷಗಳಿದ್ದಲ್ಲಿ ಮಾತ್ರ ಒಟ್ಟಾಗುತ್ತಿದ್ದೆವು. ಆಗೆಲ್ಲಾ ಹಿಂದಿನ ಗತನೆನಪುಗಳನ್ನು ಮೆಲುಕು ಹಾಕುತ್ತಾ ದುಃಖ, ಸಂತೋಷಗಳನ್ನು ಹಂಚಿಕೊಳ್ಳುತ್ತಿದ್ದೆವು. ತಿಂಗಳಿಗೆ ಒಂದು ಚಂದ್ರದರ್ಶನದಂತೆ ಎಂಭತ್ತೆರಡು ಎಂಭತ್ತಮೂರರ ವಯಸ್ಸಿನ ಮಧ್ಯದಲ್ಲಿ ಸಹಸ್ರ (ಒಂದು ಸಾವಿರ) ಚಂದ್ರದರ್ಶನವಾಗುತ್ತದಾದುದರಿಂದ ಸಹಸ್ರ ಚಂದ್ರದರ್ಶನ ಶಾಂತಿಯನ್ನು ಮಾಡಿಸಬೇಕೆಂಬ ಆಸೆ ಸಹೋದರರಿಗಾಯ್ತು. ಸಹಸ್ರ ಚಂದ್ರದರ್ಶನವನ್ನು ಪೂರೈಸುವುದೇ ಒಂದು ಭಾಗ್ಯವಲ್ಲವೇ? ಆದರೆ ತಂದೆಯವರು ಶಾಂತಿ ಮಾಡಿಸಿಕೊಳ್ಳಲು ಬಿಲ್‌ಕುಲ್ ಒಪ್ಪಲಿಲ್ಲ. ಮಕ್ಕಳಿಗೆಲ್ಲಾ ಖರ್ಚಿನ ಬಾಪ್ತು ಎಂದು ಬೇಡವೆಂದರು. ಆದರೆ ಮಕ್ಕಳ ಒತ್ತಾಯಕ್ಕೆ ಮಣಿದು ಒಪ್ಪಿಕೊಳ್ಳಲೇಬೇಕಾಯಿತು.

ಅಂದು ನಮಗೆಲ್ಲಾ ಒಂಥರಾ ಖುಷಿ, ಹಬ್ಬದ ವಾತಾವರಣ. ತಂದೆಯವರ ಮಜ್ಜನವಾದ ಮೇಲೆ ಕಿರಿಯ ಮಗ ಬೈತಲೆ ತೆಗೆದು ತಲೆಬಾಚಿದ. ಪಂಚೆ ಉಟ್ಟವರಿಗೆ ಶಲ್ಯ ಹೆಗಲಿಗೇರಿಸಿ ಮದುಮಗನಂತೆ ಸಿಂಗರಿಸಿದ. ನಾವೆಲ್ಲಾ ರೇಷ್ಮೆ ಸೀರೆಯನ್ನುಟ್ಟು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಬಂದ ಅತಿಥಿಗಳಿಗೆ ಆದರದಿಂದ ಸ್ವಾಗತಿಸುತ್ತಿದ್ದರು. ಸಹೋದರರು ಪಂಚೆಯುಟ್ಟು, ಶಲ್ಯವನ್ನು ಹೆಗಲಿಗೇರಿಸಿ ಬಂದವರನ್ನು ತಿಂಡಿ, ತೀರ್ಥಕ್ಕೆ ಕರೆದೊಯ್ಯುತ್ತಿದ್ದರು. ಅಂದು ಅವರ ಆಸೆಯಂತೆಯೇ ಭಕ್ಷ್ಯ ಭೋಜನಗಳು ತಯಾರಾದವು.

ನನ್ನ ತಂದೆಯೇ ಹಿರಿ ಮಗನಾದುದರಿಂದ ತಮ್ಮ, ತಂಗಿ, ಅಕ್ಕನ ಮಕ್ಕಳೆಂದು ಬಂಧುಗಳೆಲ್ಲರೂ ಕೂಡಿದ್ದರು. ಬಂಧುಗಳು, ಸ್ನೇಹಿತರೂ ಕೂಡ ಆಗಮಿಸಿದ್ದರು. ಸಹಸ್ರ ಚಂದ್ರದರ್ಶನ ಶಾಂತಿಯು ಒಂದು ಸಾವಿರ ಚಂದ್ರನ ವೀಕ್ಷಣೆ ಮಾಡಿರುವವರಿಗಾಗಿಯೇ ಮಾಡುವ ಒಂದು ಶಾಂತಿ ಹೋಮ. ಇದರಲ್ಲಿ ಪ್ರಾಯಶ್ಚಿತ್ತ ಹೋಮ, ಪವಮಾನ ಹೋಮ, ಕೂಷ್ಮಾಂಡ ಹೋಮಗಳನ್ನು ಪುರೋಹಿತ ವರ್ಗದವರಿಂದ ನೆರವೇರಿಸಿದರು.

ಪುರೋಹಿತರು ಹಿಂದಿನ ದಿನದ ರಾತ್ರಿಯೇ ನವಗ್ರಹ ಕಳಸ ಸ್ಥಾಪನೆ ಮಾಡಿ, ಅಂದೇ ಕಳಶದಲ್ಲಿ ದೇವರನ್ನು ಆವಾಹನೆ ಮಾಡಿದ್ದರು. ಮರುದಿನ ಆವಾಹನೆ ಮಾಡಿರುವ ದೇವತೆಗಳಿಗೆ ಮಂತ್ರಘೋಷದೊಂದಿಗೆ ಅಗ್ನಿಮುಖದಲ್ಲಿ ಆಹುತಿಕೊಟ್ಟರು. ನವಗ್ರಹಗಳಿಗೆಲ್ಲಾ ಆಹುತಿ ಕೊಟ್ಟ ನಂತರದಲ್ಲಿ ಚಂದ್ರನಿಗೆ, ಮೃತ್ಯುಂಜಯನಿಗೆ ಆಹುತಿಗೈದರು. ನಂತರ ಪುರೋಹಿತರು 'ಇಷ್ಟರತನಕ ಗೊತ್ತಿದ್ದೋ, ಗೊತ್ತಿಲ್ಲದೆಯೋ, ಮಾಡಿರುವ ಸಣ್ಣಪುಟ್ಟ ದೋಷಗಳು ಪರಿಹಾರವಾಗಬೇಕೆಂದು ಮಾಡಿರುತ್ತೀರಿ. ತಮಗೆ ಇದರಿಂದ ಆದಿ–ವ್ಯಾಧಿಗಳೆಲ್ಲವೂ ದೂರವಾಗಿ ಬಾಳಿನಲ್ಲಿ ಸುಖ ಶಾಂತಿ ನೆಲೆಸಲಿ. ಆದಿ ವ್ಯಾಧಿಗಳೆಂದರೆ ಮಾನಸಿಕ, ದೈಹಿಕ ಕಾಯಿಲೆಗಳು ಇಲ್ಲದಿದ್ದರೂ, ಅವೆಲ್ಲಾ ದೂರವಾಗಿ ಒಳ್ಳೆಯ ರೀತಿಯಲ್ಲಿ ಬದುಕನ್ನು ನಡೆಸಿಕೊಡಬೇಕೆಂದು ಪ್ರಾರ್ಥಿಸಿದರು. ಈ ರೀತಿಯ ಹೋಮ ಹವನದಿಂದ ದೇವತೆಗಳಿಗೆ, ಪಿತೃಗಳಿಗೆ, ಋಷಿಗಳಿಗೆ ಋಣಸಂದಾಯವಾಗುತ್ತದಾದ್ದರಿಂದ ಮಾನಸಿಕವಾಗಿ, ಸದೃಢವಾಗಿ ಬಾಳಬೇಕೆಂದು ಆಶಿಸಿದರು. ಮೂರ್ನಾಲ್ಕು ಗಂಟೆಗಳ ಕಾಲ ಹೋಮದ ಮುಂದೆ ಕುಳಿತ ತಂದೆಗೆ ದೇಹಕ್ಕೆ ಆಯಾಸವಾದರೂ ಮಾನಸಿಕವಾಗಿ ಪ್ರಫುಲ್ಲಚಿತ್ತರಾಗಿ, ಪುರೋಹಿತರ ಮಾರ್ಗದರ್ಶನದಂತೆ ಕೆಲಸ ಕಾರ್ಯಗಳಲ್ಲಿ ಭಾಗಿಯಾದರು.

ನನ್ನ ತಂಗಿಯ ಮಗಳು ತನ್ನ ಅಜ್ಜಯ್ಯನ ಮೃತ್ಯುಂಜಯ ಹೋಮದ, ಪವಮಾನ ಹೋಮದ ಫೋಟೋಗಳನ್ನು ತನ್ನ ಮೊಬೈಲ್‌ನಲ್ಲಿ ಕ್ಲಿಕ್ಕಿಸಿಕೊಂಡಿದ್ದಳು. ಹೀಗಾಗಿ ನಮಗೆ ಈ ಸವಿ ಗಳಿಗೆಯ ಕ್ಷಣಗಳನ್ನು ಮತ್ತೆ ಮತ್ತೆ ಮೆಲುಕು ಹಾಕುವಂತಾಗಿದೆ. ■